ಕವಿತೆ

ಮೌನೇಶ ನವಲಹಳ್ಳಿ

ಕಲೆ: ಪೆರ್ಮುದೆ ಮೋಹನ್ ಕುಮಾರ್

ಮೊನ್ನೆ ಬಿದ್ದ ಮಳೆಗೆ

ವಟಗುಟ್ಟಿದವು ಕಪ್ಪೆಗಳು
ಊರುಕೇರಿ ಒಂದಾದಂತೆ
ನೀರು ನಿಂತವು
ತಗ್ಗು– ದಿನ್ನೆ ಸಮನಾದಂತೆ
ಮಳೆ ಬಂದಿತ್ತು ಭವಿಷ್ಯ ನುಡಿದಂತೆ

ನಿಲ್ಲದ ಜೋಂಪು
ಉಪ್ಪರಿಗೆ ಜಂತಿ ಮನೆಯಲ್ಲೂ
ಹಲ್ಕಿಸಿದು ಉದುರಿಬಿದ್ದವು
ಜಡಗೊಂಡ ಗೋಡೆಗಳು
ಹಳ್ಳ– ಕೊಳ್ಳ ತುಂಬಿದ್ದವು
ಊರು ಮೈನೆರದಂತೆ

ಎಲ್ಲೆಂದರಲ್ಲಿ
ನಾಯಿಕೊಡೆಗಳು ಝಂಡಾ ಊರಿದ್ದವು
ಬಯಲು ತಿಪ್ಪೆಗಳಲಿ ಬಳ್ಳಿ ಚಪ್ಪರವೆದ್ದು
ಹಸಿರು ತಾಂಡವವಾಡುತ್ತಿತ್ತು
ಹೊಲ– ಗದ್ದೆಗಳಲ್ಲಿ

ನೀರಿನ ಮಟ್ಟ ಇಳಿದಂತೆ
ಮನಸ್ಸು ಹೊಗೆಯಾತು
ಎಲ್ಲ ದೃಗ್ಗೋಚರ
ತಗ್ಗು– ದಿನ್ನೆ ಅಸಮಾನತೆ
ಪಸೆಯಾರಿದಂತೆ
ಬೆತ್ತಲೆಯಾತು ಭೂತ

ಸ್ಮೃತಿ ಗರಿಗೆದರಿತು
ಕಲ್ಯಾಣದಲ್ಲಿ ಬಿರುಕು

ಗೋಡೆಗಳು ಚಿಗುರಿದವು
ಬುಡಮೇಲಾದವು ಕಟ್ಟುಗಳು
ರಕ್ತಸಿಕ್ತವಾದವು ಬೀದಿಗಳು
ರಣಾಂಗಣದಂತೆ
ಸದ್ಯ
ವಿಷಪ್ರಾಶನವಾದ ಇಳೆ
ಕಣ್ಬೆಟ್ಟು ಘೀಳಿಡುತ್ತಿರುವ ಕಳೆ
ಉದುಲು ಪಾಚಿಗಟ್ಟಿದ ದೈವ ದಡಗಳು
ಜಾರಿ ಬೀಳುತ್ತಿರುವ ಮರಗಳು
ಅಮಲೇರಿದ ಸಸಿಗಳು

ಹುಸಿ ಹುರಿಯಾಳೀಗ
ಸೋಗಿನ ಪ್ರಭುತ್ವ
ರಕ್ಷಣೆಯ ಹೊಣೆಹೊತ್ತ ಹುತ್ತಗಳು
ಸೆಟೆದು ನಿಂತ ವಿಕ್ಷಿಪ್ತ ಚಿತ್ತಗಳು
ಮೊನ್ನೆ ಮಳೆಗೆ ಬಿದ್ದ ಕೆಟ್ಟ ಕನಸುಗಳು